Regd No B G 155 Sri

ಸತ್ಯವಾದಿ

25—5—1965

48th Year
Satyavadi
DAILY
MYSORE 4

ಸಂಪಾದಕರು — ಶ್ರೀ ಎಸ್ ಎಸ್ ಹಳೆಯ ಮತ್ತು ಶ್ರೀ ಎಂ ಎಸ್ ಶ್ರೀನಿವಾಸ ಮೂರ್ತಿ ಸಂಪಾದಕರು — ಧರ್ಮಪ್ರಚಾರನಿರತ ಎ ಎಸ್ ಕೃಷ್ಣರಾವ್ 2ನೆಪೈ

ಕೇರಳದಲ್ಲಿ ಕೊಬ್ಬರಿ ಎಣ್ಣೆ ಗಿರಣಿ ಗಳಿಗೆ ಕೆಲಸವಿಲ್ಲ

ಅಲಪ್ಪೆ— ಕೇರಳದಲ್ಲಿನ 2000 ಕೊಬ್ಬರಿ ಎಣ್ಣೆ ಗಿರಣಿಗಳಲ್ಲಿ ಶೇಕಟ 80 ಕೊಬರಿಯ ವಿಪರೀತ ಬಿಸಿ ಮತ್ತು ಅಭಾವ ಕ್ಕಾಗಿ ಕೆಲಸ ನಿಲ್ಲಿಸಿವೆ.

★

ನವದೆಹಲಿ— ರಾವಃಕೃಷ್ಣಪುರದಲ್ಲಿ ಶ್ರೀ ಜೆಂಕಟೇಶ್ವರಸ್ವಾಮಿ ದೇವಾಲಯ ಕಟ್ಟಲು ವೆಂಕಟೇಶ್ವರ ಪು ಂ ದಿ ರ ಸಮಿತಿಗೆ ಭಾಂತ-ಸರ್ಕಾರವು 1200 ಗಜ ನಿವೇಶನ ಕೊಟ್ಟಿದೆ

★

ಬೆಂಗಳೂರು— ರಾಜ್ಯದಲ್ಲಿ ಆಹಾರ, ಸಿಮೆಎಣ್ಣೆ, ಡಿಯಸಲ್‌ಎಣ್ಣೆ ಅಭಾವ ಹೆಚ್ಚಿರುವ ಬಗ್ಗೆ ಪಿಎಸ್ಪಿ ಕಾರ್ಯಕಾರಿ ಸಮಿತಿ ಚಿಂತೆ ವ್ಯಕ್ತಪಡಿಸಿದೆ.

—

ಲಕ್ನೊ— ಕೈಬಾಂಬು ಎಸೆಯುವ ಶಿಕ್ಷಣದಲ್ಲಿ ಎಸೆದ ಒಂದು ಕೈಬಾಂಬು ಅದಂ ಖಾನನಕ್ಕೆ ತಗಲದೆ ಬೇರೆ ಕಡೆಗೆ ತಗಲಿ ಸೈನ್ಯದ ಶಿಕ್ಷಣಮತ್ತಿಬ್ಬರು ಜವನರು ಮಡಿದರು.

❋

ಬೆಂಗಳೂರು— ರಾಜ್ಯದ ಗಡಿಜಿಲ್ಲೆ ಅತ್ತಿಬೆಲೆ ಹತ್ತಿರ ಸಿ ಐ ಡಿ ಪೋಲೀಸರು ಗೊಧೀ ಮೂಟೆಗಳು ತುಂಬಿದ ಲಾರಿಗಳನ್ನು ಹಿಡಿದರು — ಇವು 20 ಸಾವಿರ ಬೆಲೆಯ 215 ಮೂಟೆ ಗೋಧಿಯನ್ನು ಬೆಂಗಳೂರಿನಿಂದ ಮದ್ರಾಸಿಗೆ ಅಕ್ರಮವಾಗಿ ಸಾಗಿಸಲಾಗುತ್ತಿತ್ತು.

=

ಲಂಡನ್— ಉತ್ತರ ವಿಯಟ್ನಾಂ ಗಡಿಯಲ್ಲಿ ಚೀನಾ ಸೈನ್ಯದ ಚಟುವಟಿಕೆ ಜಾಸ್ತಿಯಾಗಿದೆ

ಸಮಾಚಾರ ಸಂಗ್ರಹ

ಬೊಂಬಾಯಿ— ಮಹಾರಾಷ್ಟ್ರದಲ್ಲಿ ಹೊಸ ಸಾರಾಯಿ ತಯಾರಿಸಲು ಅನುಮತಿ ಕೊಡಲಾಗುವುದು

❋

ಗೈರೋ ಹತ್ತಿರ ಗುರುವಾರ ಅದ ಪಾಕಿಸ್ತಾನ ವಿಮಾನ ಅಪಘಾತದಲ್ಲಿ ಸತ್ತ 28 ಹಿರಿಯ ಪತ್ರಿಕೋದ್ಯೋಗಿಗಳು ಮಿತ್ರರಾರ ಗೌರವಾರ್ಥವಾಗಿ ಶುಕ್ರವಾರ ಪಾಕಿಸ್ತಾನಾದ್ಯಂತ ಪತ್ರಿಕೆಗಳು ಪ್ರಕಟಿಸಲ್ಪಡಲಿಲ್ಲ.

❋

ಬೆಂಗಳೂರು— ರಾಜ್ಯದಲ್ಲಿ ಅತ್ಯವಶ್ಯವಾದ ಪಾಜೆಕ್ಟ್‌ಗಳಿಗೆ ತೊಂದರೆಯಾಗದಿರಲು ರಾಜ್ಯಕ್ಕೆ ಕೇಂದ್ರದ ಸಹಾಯ ಅವಶ್ಯಕವೆಂದು ಮುಖ್ಯ ಮಂತ್ರಿಗಳು ಹೇಳಿದರು.

❋

ಮಾಂಚಿಸ್ಟರ್‌ನಲ್ಲಿ ಜೂಕ್ 1 ರಂದು ನಡೆಯುತ್ತಿರುವ ಕಾಮನ್ವೆಲ್ತ್ ಪಂದ್ಯದಲ್ಲಿ ಭಾರತದ ಜಟ್ಟಿಗಳು ಭಾಗವಹಿಸುವ ಬಗ್ಗೆ ಭಾರತ ಸರಕಾರಿಂದ ಹಣದ ಮುಂಜೂರಾತಿ ಇನ್ನೂ ಬಂದಿಲ್ಲವೆಂದು ವರದಿ.

★

ಷೇಕ್ ಅಬ್ದುಲ್ಲಾನು ಅಧಿಕವರಿಗಳ ಅಪ್ಪಣೆ ಇಲ್ಲದೆ ಭೇಟಿ ಮಾಡಿದ್ದಕ್ಕೆ ಬ್ರಿಟಿಷ್ ಪತ್ರಿಕೋದ್ಯೋಗಿ ಸ್ಯಾಟ್ಲಿಯನ್ನು ಭಾರತದಿಂದ ಹೊಂದೂಡಿದ ವಿಷಯದಲ್ಲಿ ಬ್ರಿಟಿಷ್ ಸರ್ಕಾರದ ಆಕ್ಷೇಪಣೆ ಏನೂ ಇಲ್ಲವೆಂದು ಪ್ರಕಟವಾಗಿದೆ.

★

ನವದೆಹಲಿ— ದಹಗಾವಿನಲ್ಲಿನ ಹಿಂದೂಗಳ ಮೇಲೆ ಪಾಕಿಸ್ತಾನಿ ಪೋಲೀಸರು ನಡೆಸುತ್ತಿರುವ ಹಿಂಸೆ, ದಬ್ಬಾಳಿಕೆ ಬಗ್ಗೆ ಭಾರತ ಪ್ರತಿಭಡಿಸಿ ಇದು ಕೂಡಲೇ ನಿಲ್ಲಬೇಕೆಂದು ಎಚ್ಚರಿಸಿದೆ.

★

ಪೂರ್ವ ಪಾಕಿಸ್ತಾನ ಗಡಿಯಲ್ಲಿ ಬ್ಲಾಕ್ ಔಟ್ ಪ್ರಾಕ್ಟಿಸ್ ಪ್ರಾರಂಭಿಸಲಾಗಿದೆ

ಉಚಿತ ನೇತ್ರ ಪರೀಕ್ಷೆ

ಮೈಸೂರು — ಪದ್ಮಶ್ರೀ ಡಾ॥ ಎಂ ಸಿ ಮೋದಿಯವರು ತಾ॥ 26 ಶುಂಜೆ 5 ಗಂಟೆಗೆ ರಾಮಾನುಜಾ ಶಸ್ತ್ರಯಾಲ್ಲಿರುವ ನೇತ್ರಾಂವಃದ ಹಾಸ್ಪಲಿನಲ್ಲಿಉ ಚಿತ ನೇತ್ರ ಪರೀಕ್ಷೆ ನಡೆಸುವರು

❋

ದೇವನಾವು ಹಂಚಿಕೆಗೆ !

ಹ್ಯಾಂಗರ್ಗ್ (ಡಾಡ್) — ಜರ್ಮನಿಯು ಹೆಸರಾಂತ ಕವಿಗಳಲ್ಲೊಬ್ಬರಾದ ಜೋಹಕ್ ಸಬಾಸ್ಟಿಯನ್ ಬಾಷರು 1724 ರಲ್ಲಿ ತಾವೇ ಬರೆದ ಭಕ್ತಗೀತೆಗಳ ಹಸ್ತಪ್ರತಿ ಈಗ ಹರಾಜಿಗೆ ಬಂದಿದ್ದು ಅತಿ ಹೆಚ್ಚಿನ ಪೈಪೋಟಿ ನಿರೀಕ್ಷೆ ಇರುವುದರಿಂದ ಹರಾಜನ್ನು 75 000 ರೂಗಳಿಂದ ಆರಂಭಿಸಲಾಗುವುದು. (ಯೂ ಪಿ ಎಸ್)

★

ಮೈಸೂರಿನಲ್ಲಿ ನಡೆಯುತ್ತಿರುವ ಮೂರು ಬಿ-ಸಿಗೆ ಶಿಬಿರಗಳಲ್ಲಿ ಪಜ್ಞಾನ ಬೋಧೆಯು ಹೊಸ ವಿಧಾನಗಳನ್ನು ಕಲಿಯುತ್ತಿರುವ 135 ಮಂದಿ ಕಾಲೇಜು ಉಪಾಧ್ಯಾಯರುಗಳು ಸಿದ್ಧರಲ್ಲೇ ತಮ್ಮ ತಮ್ಮ ರಾಜ್ಯಗಳಿಗೆ ಹಿಂತಿರುಗಲಿದ್ದಾರೆ

★

ಬೆಂಗಳೂರು— ರಾಜ್ಯದ 4ನೇ ಯೋಜನೆಗೆ 500 ಕೋಟಿ ರೂಗಳ ವ್ಯಯವು ಯೋಜಿಸಲಾಗಿದೆ.

❋

ನವದೆಹಲಿ— ಸಿಡುಬು ರೋಗ ನಿವಾರಣೆ ಚಳವಳಿಯನ್ನು ಮುಂತ್ಯಾಯಗೊಳಿಸುವುದಕ್ಕೆ ಅವಕಾಶ ಮಾಡಿಕೊಡಲು ರಷ್ಯಾ ಇನ್ನೂ 200 ಪಶಲಕ್ಷ ಡೋಜು ಫ್ರೀಜ್ ಡ್ರೈಡ್ ಸಿಡುಬು ಲಸಿಕೆಯನ್ನು ದಾನವಾಗಿ ಕೊಡಲು ಮುಂದೆಬಂದಿದೆ.

❋

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕರಣಾಚಾರ್ಯ, ಜ್ಯೋತಿರ್ವಿದ್ಯಾಪ್ರವೀಣ
ಸಂಪಕೃಷ್ಣಜೋಯಿಸರಿಂದ

26 ಬುಧವಾರ ನವಮಿ ಪೂರ್ವಾಭಾದ್ರ

ಶಾಸ್ತ್ರಧರ್ಮ ಪ್ರಚಾರ ಸಭಾ

Sastra Dharma Prachar Sabha

ಜಗತ್ತಿನಲ್ಲಿರುವ ಜೀವಿಗಳು ತಮ್ಮ ತಮ್ಮ ಕರ್ಮಾನುಸಾರ ನಾನಾ ತರಹದ ಜನ್ಮಗಳನ್ನು ಹೊಂದಿ ಕಷ್ಟಸುಖಗಳನ್ನು ಹೊಂದುತ್ತವೆ : ಈ ರೀತಿಯ ನಾನಾ ಜಂತುಗಳಾಗಿ ಹುಟ್ಟುವಾದಿನ ಚಕ್ರದಲ್ಲಿ ಸತ್ತುವುದೇ ಸಂಸಾರವೆನಿಸುವುದು ; ಮಾನವಜನ್ಮವನ್ನು ಹೊಂದಿರುವಾಗ ತನ್ನ ಪರಮ ಧ್ಯೇಯವನ್ನು ತಿಳಿಯದೇ ಇಂದ್ರಿಯಗಳ ವಶವಾಗಿ ನಾನಾ ರೀತಿಯ ಪಾಪಗಳನ್ನು ಮಾಡುವುದರಿಂದಲೇ ಜೀವಿಯು ಸಂಸಾರಚಕ್ರದಲ್ಲಿ ಸಿಕ್ಕಿ ನಾನಾ ವಿಧದ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ : ಪ್ರತಿಯೊಬ್ಬನೂ ಈ ರೀತಿ ಇಂದ್ರಿಯಗಳಿಗೆ ವಶನಾಗದಂತೆ ಮಾಡಿ, ಮನಸದಿಂದ ಕಾಪಾಡಿ, ಸಂಸಾರಚಕ್ರವನ್ನು ಕಸ್ಪಿನುವ ಪವಿತ್ರ ಗ್ರಂಥಗಳಿಗೆ ಶಾಸ್ತ್ರಗಳೆಂದು ಕರೆಯುತ್ತಾರೆ

ಶಾಸ್ತ್ರಗಳಲ್ಲಿ ಏನು ಹೇಳಿದೆಯೋ ಅದರಂತೆ ಪ್ರತಿಯೆಬ್ಬನೂ ನಡೆದಲ್ಲಿ ಸಕಾಲದಲ್ಲಿ ಮಳೆಬಾಗುತ್ತದೆ ; ಬೆಳೆ ಚೆನ್ನಾಗಿ ಆಗುತ್ತದೆ ; ಕಳ್ಳತನ, ದರೋಡೆ, ಸುಲಿಗೆ ಮುಂತಾದವು ನಡೆಯುವುದಿಲ್ಲ : ಋತ.ಧರ್ಮವು ಸಮರ್ಪಕವಾಗಿ ನಡೆಯುತ್ತದೆ ; ಈ ರೀತಿಯಾಗಿ ಜಗತ್ತು ಸುಭಿಕ್ಷದಿಂದ ಕೂಡಿರಬೇಕಾದರೆ ಶಾಸ್ತ್ರಗಳಲ್ಲಿ ಹೇಳಿರುವಂತೆ ನಡೆಯಬೇಕಾದುದು ಅವಶ್ಯಕ ; ಶಿಕಾಸ್ತ್ರಸಮ್ಮಾನವೆಂಬ ಜನಶ್ರುತ್ನು ಧರಿಸಿ ಸಂರಕ್ಷಿಸುವ ಯಾವ ಕ್ರಿಯೆ ಇದೆಯೋ ಅದನ್ನು ಧರ್ಮವೆಂದು ಕರೆಯುತ್ತಾರೆ : ಇಂತಹ ಶಕಸಾಸ್ತ್ರನಷ್ಟಾನವೆಂಬ ಧರ್ಮವನ್ನು ಜಗತ್ತಿನಲ್ಲೆಲ್ಲಾ ಪ್ರಚಾರ ಮಾಡಬೇಕೆಂದು ಧ್ಯೇಯವನ್ನಿಟ್ಟುಕೊಂಡು ಕೆಲಸ ಮಾಡುತ್ತಿರುವ ಸಭೆಯೇ ಶಾಸ್ತ್ರಧರ್ಮ ಪ್ರಚಾರ ಸಭೆ.

ಜಗತ್ತು ಉದಯವಾದಾಗಿನಿಂದಲೂ ಇಮ್ಮು ಎಂದಿಗೂ ನಾಶಹೊಂದದೇ ಇರುವುದರಿಂದಲೂ, ಸನಾತನನೆಂಬ ಹೆಸರನ್ನು ಹೊಂದಿರುವ ಪರಮಾತ್ಮನು ತಾನೇ ಸೃಷ್ಟಿಸುತ್ತಾರೆ ಉಪದೇಶಮಾಡಿ ಅನೇಕಾವರ್ತಿ ಈ ಧರ್ಮಾನುಯಾಯಿಗಳಲ್ಲಿ ಅವತಾರಮಾಡಿ ಪ್ರಚಾರ ಮಾಡಿದ್ದರಿಂದಲೂ ಈ ಧರ್ಮಕ್ಕೆ ಸನಾತನ ಧರ್ಮವೆಂದು ಹೆಸರಿದೆ.

ಹಿಂದೆ ಜಗತ್ತಿನಲ್ಲಿ ಇದೊಂದೇ ಧರ್ಮ ಇತ್ತು ; ಈಗಲೂ ಕೂಡ ಧರ್ಮವೆಂದು ಹೆಸರು ಹೊಂದಿರುವುದು ಸನಾತನಧರ್ಮ ಅಥವಾ ಹಿಂದೂ ಧರ್ಮವಾತ್ರ : 2500 ವರ್ಷಗಳಿಂದೀಚೆಗೆ ಅಲ್ಲಲ್ಲೇ ಕೆಲವರು ಮತಸ್ಥಾಪಕರು ಇದಕ್ಕಿಂತ ಭಿನ್ನರೀತಿಯ ಮತಗಳನ್ನು ಸ್ಥಾಪಿಸಿದರು : ಈಗ್ಗೆ ಒಂದು ಶತಮಾನದಿಂದೀಚೆಗೆ ಹಿಂದೂಧರ್ಮದಲ್ಲಿ ಜನಿಸಿದವರೇನೇ ಕೆಲವರು ಸನಾತನಧರ್ಮದ ಪರ್ವವನ್ನು ಸಂಯಮಿಗಳಿಂದ ಅರ್ಥಮಾಡಿಕೊಳ್ಳಲಾರದೇ ತಮಗೆ ತೋರಿದಂತೆ ಕೆಲವು ಸುಧಾರಣೆಗಳನ್ನು ಮಾಡಿ, ಪ್ರತ್ಯೇಕ ಮತಗಳನ್ನು ಉಂಟುಮಾಡಿದರು : 2ನೆ3 ಶತಮಾನಗಳಿಂದ ಭೌತಿಕಶಾಸ್ತ್ರಜ್ಞರು ಕೆಲವರು ಹೊಸ ಹುಂಕ್ರಗಳನ್ನೂ ಮತ್ತಿತರ ವಿಷಯಗಳನ್ನೂ ಕಂಡುಹಿಡಿದು ತಾವು ಪ್ರತ್ಯಕ್ಷವನ್ನು ಗೆದ್ದಿರುವುದಾಗಿಯೂ ದೇವರು ಎಂಬ ಇಂದ್ರಿಯಗಳಿಗೆ ಅಗೋಚರನಾದ ಪರಮಾತ್ಮನು ಇಲ್ಲವೇ ಇಲ್ಲ ಎಂಬುದಾಗಿ ಬೋಧಿಸಲಾರಂಭಿಸಿದರು. [ಮುಂದುವರಿಯುವುದು]



ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ವುಡ್‌ಲಾಂಡ್ 21-5-65 ರಿಂದ
ಶಿ ನ ಅವೋಢ ಪ್ರಾರಂಭ

ಚಿತ್ತಾಕರ್ಷಕ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) Janwar

ಶಮ್ಮಿ ಕಪೂರ್, ರಾಜಶ್ರೀ ಮತ್ತಿತರ ಸುಪ್ರಸಿದ್ಧ ತಾರೆಯರು ಪಾಶ್ಚಾತ್ಯಸಂಗೀತ

ಸಂಗೀತ— ಶಂಕರ್ ಜೈಕಿಷನ್ ಡೈರೆಕ್ಷನ್— ಬಬ್ಬಿ ಸೋನಿಲ್

ಆಪೆರಾ— 21-5-65 ರಿಂದ

ಕಾದಲಿಕ್ಕ ನೇರಮಿಲ್ಲೆ [ತಮಿಳು]

ನವನವೋಹಕ ವರ್ಣರಂಜಿತ ಶವಿಳು ಚಿತ್ರ — ದಿನ 3 ಆಟಗಳು

SHAKTI

SUDHA

A Superb Tonic

Help The Gorakshana

★

"ಗೋರಕ್ಷಣ" ಕ್ಕೆ ಚಂದಾ ಬಲಿಗರಾಗಿರಿ

[ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹಪೂರ್ವಕವಾಗಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪಶುಸಂಪತ್ತಿನಭಿವೃದ್ಧಿ, ಶಾಸ್ತ್ರೀಯಹಾಲಿಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕಪ್ರಚಾರಮಾಸಪತ್ರಿಕೆ.

ವಾರ್ಷಿಕ ಚಂದಾ 50 ನೈಸೆ ; ಗೋರಕ್ಷಣ ಕ್ಕೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಿಳಾ: — ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nikata M S Krishna Rao
at the Satyavadi Press, Camarajapuram Mysore 4